ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	632
2	ಸದಸ್ಯರ ಹೆಸರು	:	ಶ್ರೀ ಆರ್.ಬಿ. ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು)
3	ಉತ್ತರಿಸುವ ದಿನಾಂಕ	:	16-09-2021
4	ಉತ್ತರಿಸುವವರು	:	ಮುಖ್ಯಮಂತ್ರಿಗಳು

ಕ್ರಸಂ	ಪ್ರಶ್ನೆ	ಉತ್ತರ
ಅ	ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ/34/ಬಿಸಿಎ/2004 ಬೆಂಗಳೂರು ದಿನಾಂಕ 10.03.2005 ರಂತೆ ರೂ.1.00 ಲಕ್ಷದ ಒಳಗಿನ ಮತ್ತು ಇತ್ತೀಚಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2020 ರಂತೆ ರೂ.5.00 ಲಕ್ಷಕ್ಕಿಂತ ಕಡಿಮೆ ಸೇವಾ ಶುಲ್ಕ ಇರುವ ಕಾಮಗಾರಿಗಳಿಗೆ ಟೆಂಡರ್ ಕರೆಯದೆ ಮುಚ್ಚಿದ ಲಕೋಟೆಯಲ್ಲಿ ಕೊಟೇಶನ್ ಕರೆದು ಕಡಿಮೆ ದರ ನಮೂದಿಸಿದವರಿಗೆ ಕಾರ್ಯಾದೇಶ ನೀಡಬೇಕೆಂದು ತಿದ್ದುಪಡಿ ಆದೇಶ ವಾಗಿದ್ದರೂ ಸಹ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಶೇಕಡಾ 25ರಷ್ಟು ಮೀಸಲಿಟ್ಟು, ಮೇಲ್ಕಂಡ ಆದೇಶದಂತೆ ಪರಿಶಿಷ್ಟ ಜಾತಿಯ ರೂ.1.00 ಲಕ್ಷ ಮತ್ತು ರೂ.5.00 ಲಕ್ಷದವರೆಗಿನ ಕಾಮಗಾರಿಗಳಾದ ಆಟೋ ಟಿಪ್ಪರ್ ಮತ್ತು ಕಾಂಪ್ಯಾಕ್ಟರ್ ಸೇವಾ ಕೆಲಸವನ್ನು ನೀಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ, ಆದೇಶದ ರೀತ್ಯಾ ಕಾಮಗಾರಿಗಳ ಕಾರ್ಯಾದೇಶ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)	ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ: 24739/2012 ಕವಿತಾ ಶಂಕರ್ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ ಪ್ರಥಮ ಮತ್ತು ದ್ವಿತೀಯ ಹಂತದ ಸಂಗ್ರಹಣೆ ಹಾಗೂ ಸಾಗಾಣಿಕೆಗೆ ಸಂಬಂಧಿಸಿದಂತೆ ದಿನಾಂಕ 30.08.2013, ಸೆಪ್ಟೆಂಬರ್ ಮತ್ತು ಅಕ್ಟೋಬರ್-2013 ರಲ್ಲಿ ನೀಡಿರುವ ಆದೇಶಗಳಲ್ಲಿ ಟೆಂಡರ್ ಮುಖಾಂತರ ಸೇವಾದಾರರನ್ನು ನೇಮಿಸುವವರೆಗೆ, ಇಲಾಖಾ ವತಿಯಿಂದ ಪ್ರಥಮ ಮತ್ತು ದ್ವಿತೀಯ ಹಂತದ ತ್ಯಾಜ್ಯ ಸಂಗ್ರಹಣೆ ಹಾಗೂ ಸಾಗಾಣಿಕೆಯನ್ನು ಕೈಗೊಳ್ಳಲು ಸೂಚಿಸಲಾಗಿರುತ್ತದೆ. ಅದರಂತೆ, ಪಾಲಿಕೆಯು ತಾತ್ಕಾಲಿಕವಾಗಿ ಕೊಟೇಶನ್ ಮುಖಾಂತರ ಸರಬರಾಜು ಆದೇಶವನ್ನು ನೀಡಿ ಸೇವಾದಾರರನ್ನು ನೇಮಿಸಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ/34/ಬಿಸಿಎ/2004 ಬೆಂಗಳೂರು ದಿನಾಂಕ 10.03.2005 ರಂತೆ ಪ್ರತಿ ವಾರ್ಡ್‌ಗಳಿಗೆ ಅವಶ್ಯವಿರುವ ಆಟೋ ಟಿಪ್ಪರ್ ವಾಹನಗಳ ಪೈಕಿ ಶೇ. 24.10 ರಷ್ಟು ವಾಹನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದವರಿಗೆ ಸರಬರಾಜು ಆದೇಶವನ್ನು ನೀಡಲಾಗಿರುತ್ತದೆ. ತದನಂತರ, ಪಾಲಿಕೆ ವತಿಯಿಂದ ಹಲವು ಬಾರಿ ಟೆಂಡರ್ ಆಹ್ವಾನಿಸಲಾಗಿದ್ದರೂ ಸಹ ಕಾರಣಾಂತರಗಳಿಂದ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಾಧ್ಯವಾಗದೇ ಇದ್ದುದರಿಂದ, ಸರಬರಾಜು ಆದೇಶವನ್ನು ಮುಂದುವರೆಸಿಕೊಂಡು ಬರಲಾಗುತ್ತಿತ್ತು. ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ (CAG) ರವರು ಸರ್ಕಾರದಿಂದ 4(ಜಿ) ವಿನಾಯಿತಿ ಪಡೆಯದೇ ಸರಬರಾಜು ಆದೇಶವನ್ನು ಮುಂದುವರೆಸಿರುವ ಕ್ರಮಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಮುಂದುವರೆದು, ದಿನಾಂಕ 18.01.2019 ರಂದು ಪಾಲಿಕೆಯ ಎಲ್ಲಾ 198 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ ಪ್ರಥಮ

. . .2/-

		ಮತ್ತು ದ್ವಿತೀಯ ಹಂತದ ಸಂಗ್ರಹಣೆ ಹಾಗೂ ಸಾಗಾಣಿಕೆಗಾಗಿ ಅವಶ್ಯವಿರುವ ವಾಹನಗಳನ್ನು ಒದಗಿಸಲು ಪ್ರತ್ಯೇಕವಾಗಿ ವಾರ್ಡ್‌ವಾರು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗಳ ವಾರ್ಷಿಕ ಅಂದಾಜು ಮೊತ್ತವು ರೂ.1.00 ಕೋಟಿಗಿಂತ ಅಧಿಕವಾಗಿದ್ದುದರಿಂದ, ಶೇ. 24.10 ರಷ್ಟು ಕಾಮಗಾರಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದವರಿಗೆ ಮೀಸಲಿರಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ, ಟೆಂಡರ್ ದಸ್ತಾವೇಜಿನಲ್ಲಿ ಪ್ರತಿ ವಾರ್ಡ್‌ಗಳಿಗೆ ಅವಶ್ಯವಿರುವ ಆಟೋ ಟಿಪ್ಪರ್ ವಾಹನಗಳ ಪೈಕಿ ಶೇ. 24.10 ರಷ್ಟು ವಾಹನಗಳನ್ನು (ಚಾಲಕರು ಮತ್ತು ಸಹಾಯಕರುಗಳನ್ನು ಒಳಗೊಂಡಂತೆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದವರಿಂದ ಕಡ್ಡಾಯವಾಗಿ ಪಡೆಯಲು ಸೂಚಿಸಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಈಗಾಗಲೇ 114 ವಾರ್ಡ್‌ಗಳಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಈ ಪೈಕಿ 94 ವಾರ್ಡ್‌ಗಳಲ್ಲಿ ಸೇವಾದಾರರು ಸೇವೆಯನ್ನು ಪ್ರಾರಂಭಿಸಿದ್ದು, ಟೆಂಡರ್ ಷರತ್ತಿನಂತೆ ಶೇ. 24.10 ರಷ್ಟು ಆಟೋ ಟಿಪ್ಪರ್ ವಾಹನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದವರಿಂದ ಪಡೆಯಲಾಗಿರುತ್ತದೆ. ಉಳಿದ ವಾರ್ಡ್‌ಗಳಲ್ಲಿ ಹಳೆಯ ಸರಬರಾಜುದಾರರನ್ನು ಮುಂದುವರೆಸಲಾಗಿರುತ್ತದೆ. ಉಳಿದಂತೆ, ಸರಬರಾಜು ಆದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾರ್ಡ್‌ಗಳಲ್ಲಿ, ಶೇ. 24.10 ರಷ್ಟು ಆಟೋ ಟಿಪ್ಪರ್ ವಾಹನಗಳನ್ನು ಈಗಾಗಲೇ ನಿಯೋಜನೆಗೊಂಡಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದ ಸೇವಾದಾರರನ್ನೇ ಮುಂದುವರಿಸಲಾಗಿರುತ್ತದೆ.

ಸಂಖ್ಯೆ: ನಅಇ 222 ಎಂಎನ್‌ವೈ 2021 (ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ